ಕೇಂದ್ರದ ಬಾಲಿಕಾ ಸಮೃದ್ಧಿ ಯೋಜನೆ ಕೇಂದ್ರದ ಹಣ

672(212) ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

1) ಕೇಂದ್ರದ ಬಾಲಿಕಾ ಸಮೃದ್ಧಿ ಯೋಜನೆಯಡಿ ರಾಜ್ಯವು ಇದುವರೆವಿಗೂ ಹಮ್ಮಿಕೊಂಡಿರುವ ಕಾರ್ಯಕ್ರಮಗಳೇನು?

2) ಈ ಯೋಜನೆ ಅನುಷ್ಠಾನಕ್ಕಾಗಿ ಕೇಂದ್ರ ಸರ್ಕಾರ ಎಷ್ಟು ಹಣ ಮಂಜೂರು ಮಾಡಿದೆ?

3) ಸದರಿ ಹಣವನ್ನು ರಾಜ್ಯವು ಸಂಪೂರ್ಣವಾಗಿ ಬಳಸಿದೆಯೇ?

4) ಬಳಸದಿದ್ದಲ್ಲಿ ಕಾರಣವೇನು? ಬಳಸದೆ ಉಳಿದ ಹಣವನ್ನು ಕೇಂದ್ರ ಸರ್ಕಾರಕ್ಕೆ ಹಿಂದಕ್ಕೆ ನೀಡಲಾಗಿದೆಯೇ?

5) ಹೆಣ್ಣುಮಗುವಿನ ಸ್ಥಿತಿಗತಿಯನ್ನು ಸುಧಾರಿಸುವ ಸಲುವಾಗಿ ಹಮ್ಮಿಕೊಂಡ ಈ ಯೋಜನೆ ನಿರರ್ಥಕವಾಗುವುದಿಲ್ಲವೆ?

ಶ್ರೀಮತಿ ಮೋಟಮ್ಮ (ಮಹಿಳಾ ಮತ್ತು ಮಕ್ಕಳ ಸಚಿವರು) :

1) ಬಾಲಿಕಾ ಸಮೃದ್ಧಿ ಯೋಜನೆಯು ಬಡತನ ರೇಖೆಗಿಂತ ಕೆಳಗೆ ಇರುವ ಕುಟುಂಬಗಳಲ್ಲಿನ ತಾಯಂದಿರಿಗೆ ಹೆಣ್ಣು ಮಗುವು ಜನಿಸಿದಾಗ ರೂ 500/- ನೀಡುವುದಾಗಿರುತ್ತದೆ. ಈ ಸವಲತ್ತನ್ನು ಪಡೆಯಲು 15-08-1997ರ ನಂತರ ಜನಿಸಿದ ಒಂದು ಕುಟುಂಬದ 2 ಹೆಣ್ಣು ಮಕ್ಕಳು ಅರ್ಹರಿರುತ್ತಾರೆ. ಇದನ್ನು ತಾಯಿ ಮತ್ತು ಮಗುವಿನ ಜಂಟಿ ಖಾತೆಯಲ್ಲಿ ಠೇವಣಿ ಇಡಲಾಗುತ್ತದೆ. ಹಾಗೂ ಆ ಮಗುವು ಶಾಲೆಗೆ ಸೇರಿ ಎಸ್ ಎಸ್ ಎಲ್ ಸಿ ತನಕ ವಿದ್ಯಾಭ್ಯಾಸ ಮುಗಿಯುವವರೆವಿಗೂ, ಪೂರ್ಣಗೊಳಿಸಿದ ಪ್ರತಿ ತರಗತಿಗೂ ವಿದ್ಯಾರ್ಥಿ ವೇತನವನ್ನು ನೀಡಲಾಗುತ್ತದೆ. ಈವರೆಗೆ ಜನನ ನಂತರದ ಅನುದಾನವನ್ನು ಮಾತ್ರ ನೀಡಲಾಗಿದೆ.

2)

97-98	298.97 ಲಕ್ಷಗಳು
98-99	120.22 ಲಕ್ಷಗಳು
99-2000	151.35 ಲಕ್ಷಗಳು
2000-01	162.00 ಲಕ್ಷಗಳು
2001-02	160.00 ಲಕ್ಷಗಳು

3) ಮೊದಲ ಎರಡು ವರ್ಷಗಳಲ್ಲಿ ನೀಡಿರುವ ಹಣವನ್ನು ಸಂಪೂರ್ಣವಾಗಿ ಬಳಸಲಾಗಿದೆ.

4) 1999 ರಿಂದ ಈ ಯೋಜನೆಯನ್ನು ಪರಿಷ್ಕರಿಸಿ ನೇರವಾಗಿ ನೀಡುವ ಜನನ ನಂತರದ ಅನುದಾನವನ್ನು ಫಲಾನುಭವಿಗೆ ಹೆಚ್ಚಿನ ಬಡ್ಡಿ ಬರುವಂತೆ ಅನುಷ್ಠಾನಾಧಿಕಾರಿ ಮತ್ತು ಫಲಾನುಭವಿಯ ಜಂಟಿ ಖಾತೆಯಲ್ಲಿ ಹೂಡುವಂತೆ ಕೇಂದ್ರ ಸರ್ಕಾರದ ಮಾರ್ಗಸೂಚಿ ಇರುತ್ತದೆ. ಜಂಟಿ ಖಾತೆಯಲ್ಲಿ ಭರಿಸಲು ಆಡಳಿತಾತ್ಮಕ ಅಡಚಣೆಗಳಿರುವುದರಿಂದ ಈಗ ಪ್ರಕ್ರಿಯೆಯನ್ನು

ಸರಳೀಕರಿಸಿದ್ದು, ಯೋಜನಾ ಅನುಷ್ಠಾನವು ಪ್ರಗತಿಯಲ್ಲಿದೆ. ಆದುದರಿಂದ ಅನುದಾನವನ್ನು ಸಂಪೂರ್ಣವಾಗಿ ಉಪಯೋಗಿಸಲಾಗುವುದು. ಆದ್ದರಿಂದ ಕೇಂದ್ರ ಸರ್ಕಾರಕ್ಕೆ ಹಿಂದಿರುಗಿಸುವ ಪ್ರಮೇಯವೇ ಬರುವುದಿಲ್ಲ.

5) ಇಲ್ಲ.

ಉತ್ತರಹಳ್ಳಿ ಕ್ಷೇತ್ರದ ಅಂಗನವಾಡಿ ಕೇಂದ್ರಗಳು

673(871) ಶ್ರೀ ಅಶೋಕ್ ಆರ್. (ಉತ್ತರಹಳ್ಳಿ) : ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಉತ್ತರಹಳ್ಳಿ ವಿಧಾನ ಸಭಾ ಕ್ಷೇತ್ರದ ಅಂಗನವಾಡಿ ಕೇಂದ್ರಗಳ ಸಂಖ್ಯೆ ಎಷ್ಟು? ಈ ಕೇಂದ್ರಗಳೆಲ್ಲ ಸ್ವಂತ ಕಟ್ಟಡ ಹೊಂದಿವೆಯೇ? (ವಿವರ ನೀಡಿ)

ಆ) ಹಲವಾರು ಕೇಂದ್ರಗಳು ಸ್ವಂತ- ಕಟ್ಟಡವಿಲ್ಲದೆ ಬಾಡಿಗೆ ಕಟ್ಟಡದಲ್ಲಿಯೇ ನಡೆಸುತ್ತಿರುವುದು ಹಾಗೂ ಇದರ ಬಾಡಿಗೆಯನ್ನು ಅಂಗನವಾಡಿ ಶಿಕ್ಷಕರುಗಳೇ ತಮ್ಮ ಗೌರವಧನದ ಹಣದಲ್ಲಿ ಪಾವತಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಈ ಅಂಗನವಾಡಿ ಕೇಂದ್ರಗಳಿಗೆ ಆಹಾರ ಪದಾರ್ಥಗಳ ವಿತರಣೆ ಅಸಮರ್ಪಕವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಈ ಬಗ್ಗೆ ಸರ್ಕಾರ ಯಾವ ಕ್ರಮ ತೆಗೆದುಕೊಳ್ಳುವುದು?

ಶ್ರೀಮತಿ ಮೋಟಮ್ಮ (ಮಹಿಳಾ ಮತ್ತು ಮಕ್ಕಳ ಸಚಿವರು) :

ಅ) ಉತ್ತರಹಳ್ಳಿ ವಿಧಾನ ಸಭಾ ಕ್ಷೇತ್ರದಲ್ಲಿ 115 ಅಂಗನವಾಡಿ ಕೇಂದ್ರಗಳಿರುತ್ತವೆ.

57 ಕೇಂದ್ರಗಳಿಗೆ ಸ್ವಂತ ಕಟ್ಟಡಗಳಿರುತ್ತವೆ.

ಆ) ಇಲ್ಲ

ಇ) ಅಂಗನವಾಡಿ ಕೇಂದ್ರಗಳಿಗೆ ಆಹಾರ ಪದಾರ್ಥಗಳ ವಿತರಣೆ ಅಸಮರ್ಪಕವಾಗಿರುವುದು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ಈ) ಅನ್ವಯಿಸುವುದಿಲ್ಲ.

ಎ.ಪಿ.ಎಂ.ಸಿ.ಗಳಲ್ಲಿ ರೈತರ ಕೃಷಿ ಉತ್ಪನ್ನಗಳಿಗೆ ಮಿನಿಮಂ ಫ್ಲೋರ್ ಪ್ರೈಸ್ ನಿಗದಿ ಮಾಡುವುದು

677(1314) ಶ್ರೀ ಆತ್ಮಾನಂದ ಎಂ.ಎಸ್(ಮಂಡ್ಯ) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದ ಕೃಷಿ ಮಾರುಕಟ್ಟೆಗಳಲ್ಲಿ ರೈತರ ಉತ್ಪನ್ನಗಳಿಗೆ ಮಿನಿಮಮಂ ಫ್ಲೋರ್ ಪ್ರೈಸ್‌ನ್ನು ರೈತರಿಗೆ ನಷ್ಟವಾಗದಂತೆ ಹಿತರಕ್ಷಣೆ ಮಾಡುವ ದಿಸೆಯಲ್ಲಿ ನಿಗದಿಪಡಿಸಬೇಕಿರುವ ಅವಶ್ಯಕತೆಯನ್ನು ಸರ್ಕಾರ ಮನಗಂಡಿದೆಯೇ?

ಆ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರ ಕ್ರಮ ರೂಪಿಸಿದೆಯೇ?